# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ

ಚುಕ್ಕೆ ರಹಿತ ಪ್ರಶ್ನೆ : 1309

ಉತ್ತರ ದಿನಾಂಕ : 24-12-2021

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯಲ್ಲಿ ಹರಿಯುವ ಸೌಪರ್ಣಿಕಾ, ಕೊಲ್ಲೂರು ಚಕ್ರಾ, ವರಾಹಿ, ಕುಬ್ಜ, ಹಾಲಾಡಿ, ಸೀತಾ, ಸ್ವರ್ಣ ಉದ್ಯಾವರ, ಮಡಿಸಾಲು, ಪಲ್ಗುಣಿ (ಎಣ್ಣೆಹೊಳೆ) ಮೂಲ್ಕಿ (ಶಾಂಭವಿ) ಹೊಳೆಗಳ ನದಿ ದಂಡೆಯಲ್ಲಿರುವ ಗ್ರಾಮಗಳು ಯಾವುವು? (ನದಿವಾರು, ಗ್ರಾಮ ಪಂಚಾಯತಿವಾರು, ಗ್ರಾಮವಾರು ಮಾಹಿತಿ ನೀಡುವುದು) | ಉಡುಪಿ ಜಿಲ್ಲೆಯಲ್ಲಿ ಹರಿಯುವ ಸೌಪರ್ಣಿಕಾ (ಕೊಲ್ಲೂರು), ಚಕ್ರಾ, ವರಾಹಿ, ಕುಬ್ಜ, ಸೀತಾ, ಸ್ವರ್ಣ, ಉದ್ಯಾವರ, ಮಡಿಸಾಲು, ಫಾಲ್ಗುಣಿ (ಎಣ್ಣೆ ಹೊಳೆ), ಮೂಲ್ಕಿ (ಶಾಂಭಾವಿ), ಹೊಳೆಗಳ ನದಿ ದಂಡೆಯಲ್ಲಿರುವ ಗ್ರಾಮ ಪಂಚಾಯತ್ ಹಾಗೂ ಗ್ರಾಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ನದಿ ಮೂಲವನ್ನು ಪಡೆದ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು; (ಗ್ರಾಮ ಪಂಚಾಯತಿವಾರು, ಯೋಜನೆವಾರು ಮಾಹಿತಿಯನ್ನು ನೀಡುವುದು) | ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ನದಿ ಮೂಲವನ್ನು ಪಡೆದ ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ 117. ಗ್ರಾಮ ಪಂಚಾಯತಿವಾರು ಹಾಗೂ ಯೋಜನೆವಾರು ವಿವರಗಳನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ. |
| ಇ) | ಜಲ ಜೀವನ್ ಮಿಷನ್‌ನಡಿಯಲ್ಲಿ ಈ ನದಿಗಳಿಂದ ಗುರುತಿಸಿದ ನೀರಿನ ಪ್ರಮಾಣವೆಷ್ಟು; ನೀರಿನ ಲಭ್ಯತೆ ಕುರಿತು ಸಂಬಂಧಿಸಿದ ಇಲಾಖೆಯಿಂದ ದೃಢೀಕರಣ ಪಡೆಯಲಾಗಿದೆಯೇ; (ಪ್ರತಿಯನ್ನು ಒದಗಿಸುವುದು) | • ಜಲಜೀವನ್ ಮಿಷನ್ ಯೋಜನೆಯಡಿ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್ ಗಳಿಗೆ ಗುರುತಿಸಿದ ನದಿಗಳಿಂದ ಪಡೆಯುವ ನೀರಿನ ಪ್ರಮಾಣವನ್ನು **ಅನುಬಂಧ-3**ರಲ್ಲಿ ಲಗತ್ತಿಸಿದೆ.<br>• ವಾರಾಹಿ ನದಿಯಿಂದ ನೀರನ್ನು ಪಡೆಯಲು ಈಗಾಗಲೇ ಅನುಮೋದನೆಯಾಗಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಜಲ ಸಂಪನ್ಮೂಲ ಇಲಾಖೆಯಿಂದ ಸಹಮತಿ ಪಡೆಯಲಾಗಿದೆ **(ಪ್ರತಿಯನ್ನು ಲಗತ್ತಿಸಿದೆ)** ಹಾಗೂ ಮುಂಬರುವ ಯೋಜನೆಗಳಿಗೂ ಸಹ ಅವಶ್ಯಕತೆಗನುಗುಣವಾಗಿ ನಿಯಮಾನುಸಾರ ಅನುಮತಿ ಪಡೆಯಲಾಗುವುದು. |

.....2